5

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 23/12/20

# ಸ್ವಂತ ಊರಿಗೆ ಸಭಾಪತಿ

23/12/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಈಗಾಗಲೇ ಸರಕಾರಿ ವಾಹನ ಹಾಗೂ ಬಂಗಲೆಯನ್ನು ಹಿಂದುರಿಸಿದ್ದ ವಿಧಾನಪರಿಷತ್ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅವರು ಬೆಂಗಳೂರಿನಿಂದ ತಮ್ಮೂರಿಗೆ ವಾಪಸಾಗಿದ್ದಾರೆ.

ವಿಧಾನಪರಿಷತ್ ನಡೆದ ಗದ್ದಲದಿಂದ ತೀವ್ರ ಬೇಸರಗೊಂಡಿರುವ ಅವರು, ಮಾನಸಿಕವಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಸಜ್ಜಾಗಿದ್ದಾರೆ. ಆದರೆ ಪಕ್ಷದ ನಾಯಕರ ಒತ್ತಡಕ್ಕೆ ಮಣಿದು, ರಾಜೀನಾಮೆ ನೀಡುವುದನ್ನು ಮುಂದಕ್ಕೆ ತಳ್ಳುತ್ತಿದ್ದಾರೆ. ಆದರೆ ಸಭಾಪತಿಗಳಿಗೆ ಸಿಗುವ ಯಾವುದೇ ಸೌಲಭ್ಯಗಳನ್ನು ಪಡೆಯದಿರಲು ನಿರ್ಧರಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಈಗಾಗಲೇ ಸರಕಾರಿ ವಾಹನ ಹಾಗೂ ಬಂಗಲೆಯನ್ನು ಹಿಂದಿರುಗಿಸಿದ್ದ ಅವರು, ಇದೀಗ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ, ತಮ್ಮ ಕಚೇರಿ ಹಾಗೂ ಸರಕಾರಿ ಬಂಗಲೆಯನ್ನು ಬಳಸಲಾಗುತ್ತಿದ್ದ ಸೋಫಾ ಸೆಟ್ ಸೇರಿದಂತೆ ಪಿಠೋಪಕರಣಗಳನ್ನು ತಗೆದುಕೊಂಡು ಹೋಗುವಂತೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇನ್ನು ವಿಧಾನಪರಿಷತ್‌ನಲ್ಲಿ ಕಳೆದ ಮಂಗಳವಾರ ನಡೆದ ಘಟನೆ, ಮುಂದಿನ ಕ್ರಮ ಹಾಗೂ ರಾಜೀನಾಮೆ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಾಪ್ ಚಂದ್ರ ಶೆಟ್ಟಿ ಅವರು ಯಾವುದೇ ಪ್ರತಿಕ್ರಿಯೆ ನೀಡಲು ಸಿದ್ಧರಿಲ್ಲ.

ಮಾಧ್ಯಮಗಳಿಗೆ ಸದ್ಯಕ್ಕೆ ನನ್ನನ್ನು ಮಾತನಾಡಿಸಬೇಡಿ. ಊರಲ್ಲಿ ಆರಾಮಿದ್ದೇನೆ. ಹಾಗೇ ಇರಲು ಬಿಟ್ಟು ಬಿಡಿ ಎನ್ನುವ ಮಾತನ್ನು ಆಡುತ್ತಿದ್ದಾರೆ.

## ನಾಯಕರ ಒಪ್ಪಿಗೆಗೆ ಕಾಯುತ್ತಿರುವ ಶೆಟ್ಟಿ

ಈಗಾಗಲೇ ರಾಜೀನಾಮೆ ನೀಡಲು ಸಜ್ಜಾಗಿರುವ ಅವರು, ಪಕ್ಷದ ನಾಯಕರ ಒಪ್ಪಿಗೆಗೆ ಕಾಯುತ್ತಿದ್ದಾರೆ. ಮತ್ತೊಂದು ಅಧಿವೇಶನ ನಡೆಸಿದರೂ, ಗೋಹತ್ಯೆ ನಿಷೇಧ ವಿಧೇಯಕ ತರುವ ಮೊದಲು ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಅವಕಾಶ ಹಾಗೂ ಮತದಾನವನ್ನು ಬಿಜೆಪಿ ನಾಯಕರು ಕೇಳುತ್ತಾರೆ. ಬಿಜೆಪಿ-ಜೆಡಿಎಸ್ ಒಂದಾಗಿರುವುದರಿಂದ, ಕಾಂಗ್ರೆಸ್‌ಗೆ ಬಹುಮತ ಸಾಭೀತುಪಡಿಸಲು ಸಾಧ್ಯವಿಲ್ಲ.